ಅಸಲು ದಾವೆ ಸಂಖ್ಯೆ -129/2010
ಪಿ.ಡಬ್ಲ್ಯೂ - 02
ದಿನಾಂಕಃ 20-02-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ. ಎಸ್ ಆರ್ ಎಚ್ ವಕೀಲರಿಂದ</u>

ನೀವು ಹುಟ್ಟಿದ ದಿನಾಂಕ ಹೇಳಲು ಆಗುತ್ತದೆಯಾ ಎಂದರೆ ನೆನೆಪಿಲ್ಲ. ನಿಮಗೆ 60 ವರ್ಷ ವಯಸ್ಸು ಎಂದರೆ ಅದರ ಮೇಲೆ ಆಗಿದೆ. ನಿಮ್ಮ ವಯಸ್ಸು ಎಷ್ಟು ಎಂದು ನಿಮ್ಮ ವಕೀಲರಿಗೆ ಹೇಳಿ ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಜಮೀನು ಮತ್ತು ಪ್ರತಿವಾದಿಯರ ಜಮೀನು ಅಕ್ಕ ಪಕ್ಕದಲ್ಲಿ ಇದೆ ಎಂದರೆ ಸರಿ. ಸುಮಾರು 4-5 ವರ್ಷಗಳ ಹಿಂದೆ ಬರಿ ಬಾಯಿ ಮಾತಿನ ಜಗಳ ಆಗಿತ್ತು ಎಂದರೆ ಸರಿಯಲ್ಲ. ಅಂದಿನಿಂದ ಇಂದಿನವರೆಗೂ ನಿಮ್ಮ ಮತ್ತು ಪ್ರತಿವಾದಿಯರ ನಡುವೆ ವೈ ಮನಸ್ಸು ಇದೆ ಎಂದರೆ ಸರಿಯಲ್ಲ. 3 ನೇ ವಾದಿ ನನ್ನ ತಮ್ಮನ ಹೆಂಡತಿ. ಅವರು ನಿಮ್ಮ ತಮ್ಮ ಹೆಂಡತಿ ಇರುವುದರಿಂದ ಅವರಿಗೆ ಅನುಕೂಲವಾಗುವಂತೆ ನಿಮ್ಮನ್ನು ಕರೆಸಿದ್ದಾರೆ ಎಂದರೆ ಸರಿಯಲ್ಲ.

ಈ ದಾವೆಯನ್ನು ಯಾರು ಯಾರ ಮೇಲೆ ಹಾಕಿದ್ದಾರೆ ಎಂದರೆ ಆಸ್ತಿ ಸಲುವಾಗಿ ಮಹಾದೇವಪ್ಪನ ಮೇಲೆ ಅವರ ಅಕ್ಕ ತಂಗಿಯರು ಹಾಕಿದ್ದಾರೆ. ಯಾವ ಯಾವ ಆಸ್ತಿಯ ಮೇಲೆ ದಾವೆ ಮಾಡಿದ್ದಾರೆ ಎಂದರೆ ಸರ್ವೆ ನಂ. 23 ಮತ್ತು 27 ರ ಮೇಲೆ. ಸರ್ವೆ ನಂ. 23 ಮತ್ತು 27 ರ ಯಾವ ಭಾಗ ಎಂದು ನಿಮಗೆ ಗೊತ್ತಾ ಎಂದರೆ ಇಲ್ಲ.

ಜಾತ್ರಪ್ಪ ಲಮಾಣಿಯನ್ನು ನೀವು ನೋಡಿದ್ದೀರಿ ಎಂದರೆ ನೋಡಿಲ್ಲ. ಜಾತ್ರಪ್ಪನ ಮಗ ಫಕ್ಕೀರಪ್ಪನನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ. ಫಕ್ಕೀರಪ್ಪ ತೀರಿಕೊಂಡು ಎಷ್ಟು ವರ್ಷ ಆಯಿತು ಎಂದರೆ ಆಗ ನಾನು 15-16 ವರ್ಷ ಹುಡುಗನಾಗಿದ್ದೇನು. ಫಕ್ಕೀರಪ್ಪನಿಗೆ ಸೋಮಲೆಪ್ಪ ಎಂಬ ಮಗನಿದ್ದ ಎಂದರೆ ಸರಿ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರವನ್ನು ಯಾರು ಹೇಳಿ ಬರೆಸಿದರು ಎಂದರೆ ನಾನೇ ಹೇಳಿ ಬರೆಸಿರುತ್ತೇನೆ. ಸದರಿ ಪ್ರಮಾಣ ಪತ್ರಕ್ಕೆ ನೀವು ಕೇವಲ ಹೆಬ್ಬಟ್ಟನ್ನು ಮಾಡಿದ್ದೀರಿ ಎಂದರೆ ಸರಿಯಲ್ಲ. ಅದರಲ್ಲಿ ಏನು ಬರೆದಿದ್ದಾರೆ ಎಂದು ನಿಮಗೆ ಗೊತ್ತಾ ಎಂದರೆ ಗೊತ್ತಿದೆ.

ಮಲ್ಲಪ್ಪ, 3 ನೇ ವಾದಿಯ ತಂದೆ ಸೋಮಪ್ಪ ಎಂದರೆ ಸರಿ. ಸೋಮಪ್ಪನ ಹೆಂಡತಿ ಲಚ್ಚವ್ವ ಎಂದರೆ ಸರಿ. ಸೋಮಪ್ಪನಿಗೆ ಎಷ್ಟು ಜನ ಮಕ್ಕಳು ಎಂದರೆ 5 ಜನ ಹೆಣ್ಣುಮಕ್ಕಳು, 1 ಗಂಡು ಮಗ. ನಿಮ್ಮ ಬೇವಿನಹಳ್ಳಿ ಯಲ್ಲಿ ಸುಮಾರು ಜನ ಸೋಮಪ್ಪ ಮತ್ತು ಸೋಮಲೆಪ್ಪ ಲಮಾಣಿ ಎಂಬುವವರು ಸಾಕಷ್ಟು ಜನ ಇದ್ದಾರೆ ಎಂದರೆ ಸರಿ. ಫಕ್ಕೀರಪ್ಪನಿಗೆ ಸೋಮಪ್ಪ ಎಂಬ ಮಗನಿದ್ದಾನೆ ಎಂದು ಯಾವುದಾದರೂ ದಾಖಲೆ ನೀವು ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಫಕ್ಕೀರಪ್ಪನಿಗೆ ಸೋಮಲೆಪ್ಪ ಎಂಬ ಒಬ್ಬನೇ ಮಗನಿದ್ದಾನೆ ಎಂದರೆ ಸರಿ. ನೀವು ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಫಕ್ಕೀರಪ್ಪನ ಮಗನಾದ ಸೋಮಲೆಪ್ಪನಿಗೆ, ಸೋಮಪ್ಪ ಎಂದು ಕರೆಯುತಿದ್ದರು ಎಂದು ಸುಳ್ಳು ಬರೆಸಿದ್ದೀರಿ ಎಂದರೆ ಸರಿಯಲ್ಲ. 3 ನೇ ವಾದಿಯ ಮಾತನ್ನು ಕೇಳಿಕೊಂಡು ಪಕ್ಕಿಪರಪ್ಪನ ಮಗನಿಗೆ ಸೋಮಪ್ಪ ಮತ್ತು ಸೋಮಲೆಪ್ಪಎಂದು ಕರೆಯುತ್ತಿದ್ದರು ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಜಾತ್ರಪ್ಪನ ಮಗ ಫಕ್ಕಿರಪ್ಪನೇ ಬೇರೆ ಮತ್ತು ಸೋಮಪ್ಪ ತಂದೆ ಫಕ್ಕೀರಪ್ಪನೆ ಬೇರೆ ಎಂದರೆ ಸರಿಯಲ್ಲ.

ಸೋಮಪ್ಪನ ತಂದೆ ಫಕ್ಕಿರಪ್ಪನನ್ನು ನೋಡಿದ್ದೀರಿ ಎಂದರೆ ನೋಡಿದ್ದೇನೆ. ಅವರು ಯಾವಾಗ ತೀರಿಕೊಂಡರು ಎಂದರೆ ಸುಮಾರು 40 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ಆಗ ನಿಮಗೆ ಎಷ್ಟು ವರ್ಷ ವಯಸ್ಸಾಗಿತ್ತು ಎಂದರೆ 15 ವರ್ಷ ಆಗಿತ್ತು. ಜಾತ್ರಪ್ಪನ ಮಗ ಫಕ್ಕಿರಪ್ಪನನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ. ಜಾತ್ರಪ್ಪನ ಮಗ ಫಕ್ಕಿರಪ್ಪನ್ನು ಯಾವಾಗ ತೀರಿಕೊಂಡನು ಎಂದರೆ ಸುಮಾರು 40 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ನಿಮಗೆ ಜಾತ್ರಪ್ಪನ ಮತ್ತು ಸೋಮಪ್ಪ ಕುಟುಂಬದವರ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ನಿಮ್ಮ ಸೊಸೆಯಾದ 3 ನೇ ವಾದಿಯ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.